# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 42 (54) |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 27.01.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸಿಂಧನೂರು ನಗರಕ್ಕೆ ಹೊಂದಿಕೊಂಡಂತೆ ಇರುವ ತೋಟಗಾರಿಕೆ ಇಲಾಖೆಯ ಸುಮಾರು 22 ಎಕರೆ 11 ಗುಂಟೆ ಜಾಗವು ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. ಸಿಂಧನೂರು ನಗರಕ್ಕೆ ಹೊಂದಿಕೊಂಡಿರುವ ಪ್ರಸ್ತಾಪಿತ ಜಮೀನನ್ನು 1967-68ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆಗೆ ಹಸ್ತಾಂತರ ಮಾಡಲಾಗಿದ್ದು, ಕ್ಷೇತ್ರದ ಒಟ್ಟು ವಿಸ್ತೀರ್ಣ 22 ಎಕರೆ 11 ಗುಂಟೆ ಇದ್ದು, ಪ್ರಸ್ತುತ ಸುಮಾರು 58 ವರ್ಷ ವಯಸ್ಸಿನ 120 ಸಪೋಟ ಮರಗಳಿರುತ್ತವೆ. ಸದರಿ ತೋಟಗಾರಿಕೆ ಕ್ಷೇತ್ರಕ್ಕೆ ನೀರಿನ ಮೂಲ ಆಧಾರವಾಗಿದ್ದ D-40 ಕಾಲುವೆಯ ಅಕ್ಕಪಕ್ಕದ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿದ್ದು, ನೀರಿನ ಕಾಲುವೆಯು ಇಲ್ಲದಂತಾಗಿರುತ್ತದೆ. ಇದರಿಂದ ತೋಟಗಾರಿಕೆ ಕ್ಷೇತ್ರದಲ್ಲಿ ಶಾಶ್ವತ ನೀರಾವರಿ ವ್ಯವಸ್ಥೆ ಇಲ್ಲದಂತಾಗಿದ್ದು, ಇಲಾಖೆವತಿಯಿಂದ ಹೊಸದಾಗಿ ಬೋರ್‌ವೆಲ್ ಗಳನ್ನು ಕೊರೆಯಿಸಲಾಗಿದ್ದರೂ, ನೀರು ಲಭಿಸಿರುವುದಿಲ್ಲ ಹಾಗೂ ಇತರೆ ಯಾವುದೇ ನೀರಿನ ಮೂಲ ಇಲ್ಲದಿರುವುದರಿಂದಾಗಿ ಮರಗಳು ಸೊರಗುವುದು ಹೆಚ್ಚಾಗಿರುತ್ತದೆ.<br><br>ಸದರಿ ತೋಟಗಾರಿಕೆ ಕ್ಷೇತ್ರದ ಜಮೀನಿನ ಮೂಲ ಮಾಲಿಕತ್ವದ ಕುರಿತು ವಿವಿಧ ನ್ಯಾಯಾಲಯ ಪ್ರಕರಣಗಳ ವಿಚಾರಣೆಗಳಿಂದ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆಯಾಗಿರುತ್ತದೆ.<br><br>ಆದಾಗ್ಯೂ, ಸರ್ಕಾರಿ ಹಣ್ಣಿನ ತೋಟ, ಸಿಂಧನೂರಿನ ಕಾಂಪೌಂಡ್ ಗೋಡೆ ಮುಂಭಾಗದಲ್ಲಿ ಅನಧಿಕೃತವಾಗಿ ನಿರ್ಮಿಸಲಾದ 200 ಪೆಟ್ಟಿಗೆ ಅಂಗಡಿಗಳನ್ನು 2024ರಲ್ಲಿ ಜಿಲ್ಲಾಡಳಿತ ರಾಯಚೂರು ಹಾಗೂ ಪೋಲಿಸ್ ಇಲಾಖೆಗಳ ಸಹಯೋಗದೊಂದಿಗೆ ತೆರವುಗೊಳಿಸಲಾಗಿರುತ್ತದೆ. ಈ ಜಾಗಕ್ಕೆ ಪುನಃ ಅನಧಿಕೃತ ಪ್ರವೇಶವನ್ನು ನಿರ್ಬಂಧಿಸಲು ರೂ. 5.00 ಲಕ್ಷ ಅನುದಾನ ವೆಚ್ಚದಲ್ಲಿ ಚೈನ್ ಲಿಂಕ್ ಮೆಶ್ ಬೇಲಿಯನ್ನು ನಿರ್ಮಿಸಲಾಗಿರುತ್ತದೆ.<br><br>2025-26 ನೇ ಸಾಲಿನ ಇಲಾಖಾ ಯೋಜನೆಯಡಿ ಸಸ್ಯಾಭಿವೃದ್ಧಿ ಕಾರ್ಯಕ್ರಮದಡಿ 2000 ಸಂಖ್ಯೆ ಅಲಂಕಾರಿಕ ಸಸಿ ಮತ್ತು 2000 ಸಂಖ್ಯೆ ಅಲಂಕಾರಿಕ ಕುಂಡಗಳ ಉತ್ಪಾದನೆ, ಚಾಲೆಂಜ್ ಫಂಡ್ ಕಾರ್ಯಕ್ರಮದಡಿ 2.0 ಹೆಕ್ಟೇರ್ ಜೋಳ ಬೆಳೆಯಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ. ಕ್ಷೇತ್ರ ನಿರ್ವಹಣೆ ಕಾರ್ಯಕ್ರಮದಡಿ 6.0 ಹೆಕ್ಟೇರ್ ಪ್ರದೇಶ ಸಾಧಾರಣ ಕಾಡು ಸ್ವಚ್ಛಗೊಳಿಸುವುದು ಹಾಗೂ 10 ಟನ್ ಕೊಟ್ಟಿಗೆ ಗೊಬ್ಬರ ಒದಗಿಸಲು ಗುರಿ ಹೊಂದಿದ್ದು, ಒಟ್ಟಾರೆ ರೂ 6.215 ಲಕ್ಷಗಳ ಅನುದಾನವನ್ನು ನಿಗದಿಪಡಿಸಿ, ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುತ್ತಿದೆ. |

| | | |
|---|---|---|
| (ಆ) | ಸಿಂಧನೂರು ನಗರದ ನಿವಾಸಿಗಳು ಬೆಳಿಗ್ಗೆ ಹಾಗೂ ಸಂಜೆಯ ಸಮಯದಲ್ಲಿ ವಾಯುವಿಹಾರಕ್ಕೆ ಹೋಗಲು ಅನುಕೂಲವಾಗಿರುವ ಸುಸಜ್ಜಿತವಾದ ಪಾರ್ಕ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಗಮನಕ್ಕೆ ಬಂದಿದೆ. |
| (ಇ) | ಬಂದಿದ್ದಲ್ಲಿ, ಸದರಿ ಪ್ರಸ್ತಾಪಿತ ತೋಟಗಾರಿಕೆ ಇಲಾಖೆಯ ಜಾಗದಲ್ಲಿ ಸಿಂಧನೂರು ನಗರದ ನಿವಾಸಿಗಳಿಗೆ ವಾಯು ವಿಹಾರಕ್ಕೆ ಅನುಕೂಲವಾದ ಮಾದರಿಯಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಒಂದು ಸುಸಜ್ಜಿತವಾದ ಪಾರ್ಕ್ ಅನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ನಿಲುವೇನು? | ಈ ಹಿಂದೆ 2019-20 ನೇ ಸಾಲಿನಲ್ಲಿ ಅನುಮೋದನೆಗೊಂಡಿದ್ದ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದ 200.00 ಲಕ್ಷ ಮೊತ್ತದ ಹೈಟೆಕ್ ಪಾರ್ಕ್ ಕಾಮಗಾರಿಯು ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಸ್ಥಗಿತಗೊಂಡಿದ್ದು, ಅನುದಾನವನ್ನು KKRDB ವತಿಯಿಂದ ಅನ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಳಕೆ ಮಾಡಲಾಗಿರುತ್ತದೆ.<br><br>2025-26 ನೇ ಸಾಲಿನಲ್ಲಿ KKRDB ಯೋಜನೆಯಡಿ ತೋಟಗಾರಿಕೆಗೆ ಸಂಬಂಧಿಸಿದಂತೆ ಹೈಟೆಕ್ ಥೀಮ್ ಪಾರ್ಕ್ ಮಾಡಲು ಒಟ್ಟು ರೂ.8.0 ಕೋಟಿಗಳ ಯೋಜನಾ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಅನುಮೋದನೆಯಾದ ನಂತರ ವಿಸ್ತೃತ ಯೋಜನಾ ಪ್ರಸ್ತಾವನೆಯನ್ನು KKRDB ಗೆ ಸಲ್ಲಿಸಿ ಅನುಮೋದನೆ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. |

**ಸಂಖ್ಯೆ: HORTI 34 HGM 2026**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**